# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀಮತಿ ನಂದಿನಿ. ಜಿ., ದ್ವಿ.ದ.ಸ. ಪಂ.ರಾ.ಇಂ. ಉಪವಿಭಾಗ, ಚಿತ್ರದುರ್ಗ ಇವರ ಪತಿಯ ವೈದ್ಯಕೀಯ ವೆಚ್ಚ ಮರುಪಾವತಿ ಬಗ್ಗೆ.

**ಓದಲಾಗಿದೆ:** 1. ಮುಖ್ಯ ಇಂಜಿನಿಯರ್, ಪಂ.ರಾ.ಇಂ. ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ:ಮುಇಂ/ಪಂರಾಇಂಇ/ಸಿ-08/2020-21/1700, ದಿ:05.12.2020.

2. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 1 ಎಸ್.ಎಂ.ಆರ್ 2014, ದಿ:02.04.2014.

**ಪ್ರಸ್ತಾವನೆ:**

ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಇವರು ಮೇಲೆ ಕ್ರಮ ಸಂಖ್ಯೆ (1) ರ ದಿನಾಂಕ: 05.12.2020ರ ಪತ್ರದಲ್ಲಿ ಶ್ರೀಮತಿ ನಂದಿನಿ.ಜಿ., ದ್ವಿ.ದ.ಸ. ಪಂ.ರಾ.ಇಂ. ಉಪವಿಭಾಗ, ಚಿತ್ರದುರ್ಗ ಇವರ ಪತಿಯಾದ ಶ್ರೀ ಕೆ.ಜಿ.ಚನ್ನನಗೌಡ ಇವರಿಗೆ Chronic Calcific Pancreatitis ಖಾಯಿಲೆಯ ಚಿಕಿತ್ಸೆಯನ್ನು ಬಿ.ಜಿ.ಎಸ್.ಗ್ಲೋಬಲ್ ಆಸ್ಪತ್ರೆ ಬೆಂಗಳೂರು ಇಲ್ಲಿ ಪಡೆದಿದ್ದು, ಸದರಿ ಚಿಕಿತ್ಸೆಗೆ ಒಟ್ಟು ರೂ.12,28,895/-ಗಳು ವೆಚ್ಚವಾಗಿರುತ್ತದೆ. ಸದರಿ ಚಕಿತ್ಸಾ ಮೊತ್ತವನ್ನು ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗ ಇವರು ಸಿಜಿಹೆಚ್ಎಸ್ ದರಪಟ್ಟಿ ಅನ್ವಯ ಪರಿಶೀಲಿಸಿ, ರೂ.7,52,091/-ಗಳು ಅರ್ಹತಾ ಮೊತ್ತವನ್ನು ಮರುಪಾವತಿಸಲು ನಿಗಧಿಪಡಿಸಿರುತ್ತಾರೆ. ಸದರಿ ಆಸ್ಪತ್ರೆಯು ಸರ್ಕಾರದಿಂದ ಮಾನ್ಯತೆ ಪಡೆದ ಆಸ್ಪತ್ರೆಯಾಗಿರುತ್ತದೆ ಎಂದು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಇವರು ಅಭಿಪ್ರಾಯ ನೀಡಿರುತ್ತಾರೆ. ಹಾಗಾಗಿ ಸದರಿ ಮೊತ್ತವನ್ನು ಮರುಪಾವತಿಸಲು ಸರ್ಕಾರದ ಮಂಜೂರಾತಿ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸರ್ಕಾರದ ದಿನಾಂಕ: 05.11.2015ರ ಸುತ್ತೋಲೆಯನ್ವಯ ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಶ್ರೀಮತಿ ನಂದಿನಿ.ಜಿ., ದ್ವಿ.ದ.ಸ., ಪಂ.ರಾ.ಇಂ. ಉಪವಿಭಾಗ, ಚಿತ್ರದುರ್ಗ ಇವರ ಪತಿಯಾದ ಶ್ರೀ ಕೆ.ಜಿ.ಚನ್ನನಗೌಡ ಇವರಿಗೆ Chronic Calcific Pancreatitis ಖಾಯಿಲೆಯ ಚಿಕಿತ್ಸೆಯನ್ನು ಬಿ.ಜಿ.ಎಸ್.ಗ್ಲೋಬಲ್ ಆಸ್ಪತ್ರೆ ಬೆಂಗಳೂರು ಇಲ್ಲಿ ಪಡೆದಿದ್ದು, ಸದರಿ ಚಿಕಿತ್ಸೆಗೆ ಒಟ್ಟು ರೂ.12,28,895/-ಗಳು ವೆಚ್ಚವಾಗಿರುತ್ತದೆ. ಸದರಿ ಚಿಕಿತ್ಸಾ ಮೊತ್ತವನ್ನು ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗ ಇವರು ಸಿ.ಜಿ.ಹೆಚ್.ಎಸ್. ದರಪಟ್ಟಿ ಅನ್ವಯ ಪರಿಶೀಲಿಸಿ, ರೂ.7,52,091/-ಗಳು ಅರ್ಹತಾ ಮೊತ್ತವನ್ನು ಮರುಪಾವತಿಸಲು ನಿಗಧಿಪಡಿಸಿರುತ್ತಾರೆ. ಸದರಿ ಆಸ್ಪತ್ರೆಯು ಸರ್ಕಾರದಿಂದ ಮಾನ್ಯತೆ ಪಡೆದ ಆಸ್ಪತ್ರೆಯಾಗಿರುತ್ತದೆ ಎಂದು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಇವರು ಅಭಿಪ್ರಾಯ ನೀಡಿರುತ್ತಾರೆ. ಹಾಗಾಗಿ ರೂ.7,52,091/-ಗಳನ್ನು ಚಿಕಿತ್ಸಾ ಮೊತ್ತವೆಂದು ಮರು ಪಾವತಿಸಲು ಸರ್ಕಾರದ ಮಂಜೂರಾತಿ ನೀಡಲು ತೀರ್ಮಾನಿಸಿದೆ. ಆದ್ದರಿಂದ ಈ ಕೆಳಕಂಡ ಆದೇಶ:-

## ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 20 ಎಸ್ಎಸ್‌ಕೆ 2021

## ಬೆಂಗಳೂರು, ದಿನಾಂಕ:11.03.2022

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 34 ಎಸ್ಎಂ.ಆರ್. 2011, ದಿನಾಂಕ:28.09.2011 ರಲ್ಲಿ ಪ್ರದತ್ತವಾದ ಅಧಿಕಾರದನ್ವಯ ಶ್ರೀಮತಿ ನಂದಿನಿ. ಜಿ., ದ್ವಿ.ದ.ಸ., ಪಂ.ರಾ.ಇಂ.ಉಪವಿಭಾಗ, ಚಿತ್ರದುರ್ಗ ಇವರ

ಪತಿಯಾದ ಶ್ರೀ ಕೆ.ಜಿ.ಚನ್ನನಗೌಡ ಇವರಿಗೆ Chronic Calcific Pancreatitis ಕಾಯಿಲೆಯ ಚಿಕಿತ್ಸೆಯನ್ನು ಕರ್ನಾಟಕ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ಬಿ.ಜಿ.ಎಸ್.ಗ್ಲೋಬಲ್ ಆಸ್ಪತ್ರೆ ಬೆಂಗಳೂರು ಇಲ್ಲಿ ಪಡೆದಿದ್ದು, ಸದರಿ ಚಿಕಿತ್ಸಾ ವೆಚ್ಚದ ಪೈಕಿ ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗ ಇವರು ಸಿ.ಜಿ.ಹೆಚ್.ಎಸ್. ದರಪಟ್ಟಿ ಅನ್ವಯ ನಿಗಧಿಪಡಿಸಿರುವ ರೂ.7,52,091/-(ಏಳು ಲಕ್ಷದ ಐವತ್ತೆರಡು ಸಾವಿರದ ತೊಂಭತ್ತೊಂದು ರೂಪಾಯಿಗಳು ಮಾತ್ರ) ಗಳನ್ನು ಅರ್ಹತಾ ಮೊತ್ತವೆಂದು ಮರುಪಾವತಿಸಲು ಸರ್ಕಾರದ ಮಂಜೂರಾತಿ ನೀಡಿದೆ.

ಸದರಿ ಕ್ಲೇಮು ಮಾಡಿರುವ ಚಿಕಿತ್ಸೆಯ ವೆಚ್ಚವನ್ನು ವಿಮಾ ಸಂಸ್ಥೆ ಇತ್ಯಾದಿ ಯಾವುದೇ ಇತರೆ ಮೂಲಗಳಿಂದ ಹಿಂಪಡೆದಿರುವುದಿಲ್ಲವೆಂದು ಖಚಿತಪಡಿಸಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
11/3
(ಕೆ.ನದೀಮ್ ಅಹ್ಮದ್)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
11/03/2022

**ಇವರಿಗೆ:**

1. ಮಹಾಲೇಖಪಾಲರು, (ಲೆಕ್ಕಪತ್ರ ಅ ಮತ್ತು ಇ), ಕರ್ನಾಟಕ ಬೆಂಗಳೂರು.
2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು – ವೈದ್ಯಕೀಯ ವೆಚ್ಚದ ಮೂಲ ಬಿಲ್ಲುಗಳನ್ನು ಲಗತ್ತಿಸಿದೆ. ನೋಂದಣಿ ಅಂಚೆ ಮುಖಾಂತರ.
3. ಶ್ರೀಮತಿ ನಂದಿನಿ. ಜಿ., ದ್ವಿ.ದ.ಸ., ಪಂ.ರಾ.ಇಂ.ಉಪವಿಭಾಗ, ಚಿತ್ರದುರ್ಗ.

**ಪ್ರತಿಯನ್ನು:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾ.ಅ.ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಜಂಟಿ ಕಾರ್ಯದರ್ಶಿಗಳು, (ಆಡಳಿತ-1) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಶಾಖೆ
3. ಶಾಖಾ ರಕ್ಷಾ ಕಡತ / ವೆಬ್ ಸೈಟ್ ನಲ್ಲಿ ಪ್ರಕಟಿಸಲು
4. ಶಾಖಾ ರಕ್ಷಾಕಡತ.